# 2010 ದೇವರು ನಡೆಸುತ್ತಾನೆ 2010

ವ್ಯಕ್ತಿಯೊಬ್ಬ ತನ್ನ ಜೀವನವನ್ನೇ ಕೊನೆಗೊಳಿಸಲು ಯೋಚಿಸಿದ. ತನ್ನ ಕೆಲಸ, ಸಂಬಂಧಗಳು, ಧಾರ್ಮಿಕತ್ವ ಎಲ್ಲವನ್ನೂ ತ್ಯಜಿಸಿದ. ಕೊನೆಯ ಬಾರಿ ದೇವರೊಂದಿಗೆ ಮಾತನಾಡಲು ಕಾಡು ಪ್ರವೇಶಿಸಿದ.

ದೇವರು ಕೇಳಿದ "ಸುತ್ತಲೂ ನೋಡು ಇಲ್ಲಿರುವ ಸುಂದರವಾದ ಗಿಡಗಳನ್ನೂ, ಬಿದಿರನ್ನೂ ಕಂಡಿಯಾ ?" "ಹೌದು" ಆತನು ಉತ್ತರಿಸಿದ.

ನಾನು ಈ ಗಿಡಗಳ ಹಾಗೂ ಬಿದಿರಿನ ಬೀಜ ಬಿತ್ತಿದ ಮೇಲೆ, ಅವುಗಳನ್ನು ಬಲು ಜೋಪಾನಮಾಡಿದೆ. ಅವುಗಳಿಗೆ ಬೆಳಕನ್ನೂ, ನೀರನ್ನೂ ಒದಗಿಸಿದೆ. ಈ ಅಲಂಕಾರಿಕ ಗಿಡಗಳು ಬಲುಬೇಗನೆ ಬೆಳೆದು ಭೂಮಿಯನ್ನೆಲ್ಲಾ ಆವರಿಸಿದವು. ಆದರೆ ಬಿದಿರಿನ ಮೊಳಕೆ ಬರಲಿಲ್ಲ.

ಎರಡನೇ ವರ್ಷದಲ್ಲಿ ಗಿಡಗಳು ಹಸಿರು ತುಂಬಿ ಇನ್ನೂ ಬೆಳೆದುವು. ಬಿದಿರಿನ ಸುದ್ದಿಯೇ ಇಲ್ಲ. ಆದರೆ ನಾನು ಅದರ ನಿರೀಕ್ಷೆ ಬಿಡಲಿಲ್ಲ. ಐದನೇ ವರ್ಷದಲ್ಲಿ ಒಂದು ಪುಟ್ಟ ಮೊಳಕೆ ಒಡೆಯಿತು. ಬೇರೆ ಗಿಡಗಳಿಗೆ ಹೋಲಿಸಿದರೆ ಅದು ಬಲು ಚಿಕ್ಕದು. ಆದರೆ ಆರೇ ತಿಂಗಳುಗಳಲ್ಲಿ ಆ ಬಿದರಿನ ಗಿಡ 100 ಅಡಿಗಳಷ್ಟು ಎತ್ತರ ಬೆಳೆಯಿತು.

5 ವರ್ಷಗಳಷ್ಟು ಸಮಯ ಅದು ತನ್ನ ಬೇರುಗಳನ್ನು ಬೆಳೆಸಿತ್ತು. ನನ್ನ ಮಗುವೇ, ನೀನು ಇಷ್ಟು ದಿನ ಹೋರಾಡಿ ಮಾಡಿ ನಿನ್ನ ಬೇರುಗಳನ್ನು ಬೆಳೆಸಿದ್ದೀ. ನನ್ನ ಸೃಷ್ಟಿಯ ಯಾವ ಜೀವಿಗೂ, ಸಹಿಸಲಾರದ ಸಂಕಟವನ್ನು ನಾನು ಕೊಡಲಾರೆ. ನಾನು ಆ ಬಿದಿರಿನ ನಿರೀಕ್ಷೆಯನ್ನು ಬಿಡಲಿಲ್ಲ. ನಿನ್ನಲ್ಲಿಯೂ ನಿರೀಕ್ಷೆ ಇಟ್ಟಿದ್ದೇನೆ. ಆದರೆ ಪ್ರತಿಯೊಬ್ಬರ ಉದ್ದೇಶಗಳು ಬೇರೆ ಬೇರೆಯಾದುದರಿಂದ ನಿನ್ನನ್ನು ಇತರರಿಗೆ ಹೋಲಿಸಬೇಡ. ಆ ಗಿಡಗಳು ಮತ್ತು ಬಿದಿರಿನ ಉದ್ದೇಶಗಳು ಭಿನ್ನವಾಗಿದ್ದರೂ, ಭೂಮಿಗೆ ಅವೆರಡೂ ಅಲಂಕಾರಿಕವಾಗಿವೆ.

"ನೀನು ಕೂಡಾ ಉನ್ನತವಾಗಿ ಬೆಳೆಯುವಿ" ದೇವರು ಹೇಳಿದ "ಎಷ್ಟು ಉನ್ನತ ?" ಅವನೆಂದ. "ಆ ಬಿದಿರಿನಂತೆ ನಿನ್ನಿಂದಾಗುವಷ್ಟು ಎತ್ತರ ಬೆಳೆದು ನನಗೆ ಘನಮಾನವನ್ನು ತರುವಿ".

ಒಳ್ಳೆಯ ದಿನಗಳು ಸಂತೋಷ ತರುತ್ತವೆ. ಕೆಟ್ಟ ದಿನಗಳು ಅನುಭವ ಕೊಡುತ್ತವೆ. ಜೀವಕ್ಕೆ ಎರಡೂ ಅವಶ್ಯಕ.

ಅರ್ಥವತ್ತಾದ, ಸಂತಸಭರಿತ ಜೀವನಕ್ಕೆ ಸತತವಾದ ಸೃಜನಾತ್ಮಕತೆಯು ಅವಶ್ಯ. ಅದು ನಮ್ಮ ಆಯ್ಕೆ ಮತ್ತು ಕಾರ್ಯದಿಂದಾಗುತ್ತದೆ, ಅನಿರೀಕ್ಷಿತವಾಗಿ ಅಲ್ಲ. ನಮಗೆ ಕಾರ್ಯವಹಿಸಲು ಪ್ರತಿದಿನವೂ ಹೊಸದಾದ ಆಯ್ಕೆ ಕೊಡಲ್ಪಡುತ್ತದೆ. ಇದರ ಮೂಲಕ ನಮ್ಮ ವಿಶಿಷ್ಟ ಪ್ರಯಾಣವನ್ನು ನಾವು ರೂಪಿಸಬಲ್ಲೆವು.

2010ನೇ ವರ್ಷದಲ್ಲಿ ಮುಂದೆ ಸಾಗುವ ಸಂತೋಷವು ಮಧುರವಾಗಿದೆ... ಪರೀಕ್ಷೆಗಳು ನಿನ್ನನ್ನು ಬಲಗೊಳಿಸುತ್ತವೆ.... ಯಶಸ್ಸು ನಿನ್ನನ್ನು ಪ್ರಕಾಶಿಸುತ್ತದೆ.... ದೇವರು ನಿನ್ನನ್ನು ನಡೆಸುತ್ತಾನೆ. ಈ ವರ್ಷವೂ ಸಹ

ಸಂಗ್ರಹ : ಸುನಯನ ವಾಲ್ಟರ್ಸ್